ಈ) ಇಂತಹವರನ್ನು ರಾಜ್ಯದ ಇತರ ಭಾಗಗಳಿಗೆ ವರ್ಗಾಹಿಸಲಾಗುವುದೆ ? ಹಾಗಿದ್ದಲ್ಲಿ ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೪೦೪೮ (ಗ್ರಾಜುಯೇಟ್ ಮತ್ತು ಡಿಪ್ಲೋಮೋ ಇಂಜಿನಿಯರುಗಳು ಒಟ್ಟು ಸೇರಿ)

ಆ) ೯೩೮

ಇ) ೧೯೬

ಈ) ಇ ನಲ್ಲಿ ಸೂಚಿಸಿರುವ ೧೯೬ ಜನರ ಪೈಕಿ ೧೦೧ ಜನರು ಕಿರಿಯ ಇಂಜಿನಿಯರುಗಳು. ಇವರುಗಳನ್ನು ಬೆಂಗಳೂರು ವೃತ್ತದಿಂದ ಹೊರಕ್ಕೆ ವರ್ಗ ಮಾಡುವ ಹಾಗಿಲ್ಲ. ಇವರು ಬೆಂಗಳೂರು ವೃತ್ತಕ್ಕೆ ನೇಮಕ ಮಾಡಲ್ಪಟ್ಟವರು ಇವರನ್ನು ಭಡ್ತಿ ಮೇಲೆ ಮಾತ್ರ ಬೇರೆ ಕಡೆಗೆ ವರ್ಗಾಯಿಸ ಬಹುದು. ಇತರೆ ೫೫ ಜನರ ಬಗ್ಗೆ (ಇದರಲ್ಲಿ ಸಹಾಯಕ ಇಂಜಿನಿಯರ್‌ಗಳಿಂದ ಮುಂಖ್ಯ ಇಂಜಿನಿಯರ್ ರವರೆಲ್ಲಾ ಸೇರಿದ್ದಾರೆ) ಸಾಮಾನ್ಯ ವರ್ಗಾವಣೆ ವೇಳೆಯಲ್ಲಿ ನೀತಿ ನಿಯಮಾವಳಿಗಳನ್ನು ಮತ್ತು ಅವಶ್ಯ ಕತೆಗಳನ್ನು ಗಣನೆಗೆ ತಂದು ಕೊಂಡು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ದರಖಾಸ್ತು ಜಮೀನಿನ ಬಗ್ಗೆ

೧೯೨೬. (ಡಿ) ಶ್ರೀ ಕೆ. ಕುಶಾಲ, (ಸುಳ್ಯ) —ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ತಾಲ್ಲೂಕಿನಲ್ಲಿ ದರಖಾಸ್ತು ಮಂಜೂರಾದವರ ಜಮೀನುಗಳನ್ನು ಹರಿಜನ ಗಿರಿಜನ ಹಾಗೂ ಬಡ ಜನರ ಜಮೀನುಗಳನ್ನು ಲೆಕ್ಕಿಸದೆ, ಅರಣ್ಯ ಇಲಾಖೆಯವರು ಸ್ವಾಧೀನ, ಮಾಡಿಕೊಂಡ ಧರೆ, ಮಗೈರೆ ಹಾಕಿ ಸ್ವಾಧೀನ ಮಾಡಿದ ಸ್ಥಳಗಳು ಹಾಗೂ ಸಂಖ್ಯೆ ಎಷ್ಟು ?

ಆ) ಇಂತಹ ಸರ್ಕಾರೀ ಜಮೀನು ದರಖಾಸ್ತು ಮಂಜೂರಾದ ಭೂಮಿಯೆನ್ನು ದರಖಾಸ್ತು ಖಾಯಂದಾರರಿಗೆ ಪಾಪಸ್ಸು ಬಿಡಿಸಿ ಕೊಡುವ ಕ್ರಮ ಕೈಗೊಳ್ಳಲಾಗಿದೆಯೆ ?

ಇ) ಈ ದರಖಾಸ್ತು ಸ್ಥಳಗಳಲ್ಲಿ ಬರುವ ಮರಗಳನ್ನು ಅರಣ್ಯ ಇಲಾಖೆಯವರು ಎಷ್ಟು ದರ ಕಾಸ್ತುದಾರರ ಜಮೀನಿನಿಂದ, ಕಡಿದು ಸಾಗಿಸುವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ, ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಇಂತಹ ಪ್ರಕರಣಗಳು ಯಾವುದೂ ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಇಂತಹ ಪ್ರಸಂಗಗಳು ಇಲ್ಲದಿರುವುದರಿಂದ ಈ ದರಖಾಸ್ತು ಸ್ಥಳಗಳಲ್ಲಿ ಮರ ಕಡಿದು ಸಾಗಿ ಸುವ ಪ್ರಮೇಯ ಉದ್ಭವಿಸುವುದಿಲ್ಲ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳೆಯುತ್ತಿರುವ ಕಾಡುತ್ಪತ್ತಿಯ ಬಗ್ಗೆ

೧೯೯೭. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಬೆಳೆಯಲಾಗುವ ಕಾಡು ಉತ್ಪತ್ತಿಗಳನ್ನು ಅರಣ್ಯ ಇಲಾಖೆಯು ವರು ಹರಾಜು ಮಾಡುವ ಬಗ್ಗೆ ಅನುಸರಿಸುವ ವಿಧಾನಗಳೇನು ?

ಆ) ಸದರಿ ತಾಲ್ಲೂಕಿನ ಕಾಡು ಉತ್ಪತ್ತಿ ಹರಾಜಿನಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಮೊತ್ತ ವೆಷ್ಟು ?